**ರಾಜ್ಯದ ಸರ್ಕಾರಿ ಇಂಜಿನೀಯರಿಂಗ್ ಕಾಲೇಜುಗಳಲ್ಲಿ ರಾಷ್ಟ್ರೀಯ ಮಾನ್ಯತಾ ಮಂಡಳಿಯಿಂದ ಮಾನ್ಯತೆ ಪಡೆಯುವ ನಿಟ್ಟಿನಲ್ಲಿ ದಿನಾಂಕ:20-09-2016 ರ ಅಪರಾಹ್ನ 02.00 ಘಂಟೆಗೆ ನಡೆದ ರಾಜ್ಯ ಮಟ್ಟದ ಮಾನ್ಯತಾ ಸಭೆಯ ನಡಾವಳಿಗಳು.**

---

**ಸಭೆಗೆ ಹಾಜರಿದ್ದ ಸದಸ್ಯರುಗಳ ಪಟ್ಟಿ.**

1. ಶ್ರೀ ಆರ್. ಮಂಜುನಾಥ, ಜಂಟಿ ನಿರ್ದೇಶಕರು, ತಾ.ಶಿ.ನಿ, ಬೆಂಗಳೂರು
2. ಶ್ರೀ ರವಿಚಂದ್ರನ್ ಎನ್, ಜಂಟಿ ನಿರ್ದೇಶಕರು, ತಾ.ಶಿ.ನಿ, ಬೆಂಗಳೂರು
3. ಡಾ.ಆರ್.ವಿ.ರಂಗನಾಥ, ಪ್ರಾಧ್ಯಾಪಕರು, ಬಿ.ಎಂ.ಎಸ್. ಇಂಜನೀಯರಿಂಗ್ ಕಾಲೇಜು, ಬಸವನಗುಡಿ, ಬೆಂಗಳೂರು ಮತ್ತು ಆಹ್ವಾನಿತ ಸಂಪನ್ಮೂಲ ವ್ಯಕ್ತಿಗಳು
4. ಶ್ರೀ ಸತೀಶ ರ. ಹುದ್ದಾರ, ಉಪ-ನಿರ್ದೇಶಕರು ಹಾಗೂ ಮಾನ್ಯತ ಸಂಯೋಜಕರು, ತಾ.ಶಿ.ನಿ ಬೆಂಗಳೂರು.
5. ಶ್ರೀ ಡಿ.ಹೆಚ್. ಜಗದೀಶ್, ಅಭಿವೃದ್ಧಿ ಅಧಿಕಾರಿಗಳು; ಹಾಗೂ ಮಾನ್ಯತ ಸಂಯೋಜಕರು, ತಾ.ಶಿ.ನಿ ಬೆಂಗಳೂರು.
6. ಡಾ. ಗುರುಪ್ರಸಾದ ಎಂ.ಹೂಗಾರ, ಮಾನ್ಯತ ಸಂಯೋಜಕರು, ತಾ.ಶಿ.ನಿ ಬೆಂಗಳೂರು.
7. ಶ್ರೀಮತಿ ಪವಿತ್ರ ಪಿ.ಎಸ್, ಮಾನ್ಯತ ಸಂಯೋಜಕರು, ತಾ.ಶಿ.ನಿ ಬೆಂಗಳೂರು
8. ಶ್ರೀ ಎಸ್.ಜೆ ವೆಂಕಟೇಶ ಬಾಬು, ಮಾನ್ಯತ ಸಂಯೋಜಕರು, ತಾ.ಶಿ.ನಿ ಬೆಂಗಳೂರು.
9. ಶ್ರೀ ಬಿ.ಎಸ್ ವಾಸುಕಿ, ಮಾನ್ಯತ ಸಂಯೋಜಕರು, ತಾ.ಶಿ.ನಿ ಬೆಂಗಳೂರು.
10. ಶ್ರೀ ಭರತ್ ಲಾಲ್ ಎ.ಆರ್, ಮಾನ್ಯತ ಸಂಯೋಜಕರು, ತಾ.ಶಿ.ನಿ ಬೆಂಗಳೂರು.
11. ಹಾಜರಾಗಿದ್ದ ಎಲ್ಲಾ ಸರ್ಕಾರಿ ಇಂಜಿನೀಯರಿಂಗ ಕಾಲೇಜುಗಳ ಪ್ರಾಚಾರ್ಯರು ಮತ್ತು ವಿಭಾಗಾಧಿಕಾರಿಗಳು

**ಪ್ರಸ್ತಾವನೆ:**

ಮಾನ್ಯ ಜಂಟಿ ನಿರ್ದೇಶಕರುಗಳು ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ ತಾಂತ್ರಿಕ ಶಿಕ್ಷಣಕ್ಕೆ ಒತ್ತು ಕೊಟ್ಟು ಗುಣಮಟ್ಟದ ಶಿಕ್ಷಣವನ್ನು ನೀಡಿ ಕುಶಲತೆಯುಳ್ಳ ಕಾರ್ಯಪಡೆಯನ್ನು ತಯಾರಿಸಿಲು, Washington Accordನ ಪ್ರಕಾರ ಎಲ್ಲ ತಾಂತ್ರಿಕ ಪ್ರೋಗ್ರಾಂಗಳಿಗೆ ಮಾನ್ಯತೆ ಪಡೆಯುವುದು ಕಡ್ಡಾಯವಾಗಿರುತ್ತದೆ ಇದರ ಜೊತೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ನೇರವಾಗಿ ಕೇಂದ್ರಾನುದಾನವನ್ನು ಪಡೆಯುವ ನಿಟ್ಟಿನಲ್ಲಿ ರಾಷ್ಟ್ರೀಯ ಮಾನ್ಯತಾ ಮಂಡಳಿ ನವದೆಹಲಿ, ಇವರಿಂದ ಇಂಜನೀಯರಿಂಗ್ ಕಾಲೇಜುಗಳ ವಿವಿಧ ವಿಭಾಗಗಳು ಮಾನ್ಯತೆ ಪಡೆಯುವುದು ಅತ್ಯವಶ್ಯಕವಾಗಿರುತ್ತದೆ ಎಂದು ತಿಳಿಸುತ್ತ ತಮ್ಮ ಸಂಸ್ಥೆಗಳು ಕೇವಲ ಮಾನ್ಯತಾ ಪ್ರಮಾಣ ಪತ್ರ ಪಡೆಯುವ ಸಲುವಾಗಿ ತಯಾರಿ ಮಾಡಿಕೊಳ್ಳುವುದರ ಬದಲು ಗುಣಮಟ್ಟದ ಶಿಕ್ಷಣವನ್ನು ನೀಡುವ ಬಗ್ಗೆ ಹೆಚ್ಚಿನ ಗಮನಹರಿಸಬೇಕೆಂದು ಅಭಿಪ್ರಾಯ ಪಟ್ಟರು. ನಂತರ ಡಾ. ಕೆ.ಜಿ ಚಂದ್ರಶೇಖರ್, ಪ್ರಾಚಾರ್ಯರು, ಎಸ್.ಕೆ.ಎಸ್.ಜೆ.ಟಿ.ಐ ಸಂಸ್ಥೆ, ಬೆಂಗಳೂರು ಹಾಗೂ ಡಾ. ಕರಿಸಿದ್ದಪ್ಪ, ಪ್ರಾಚಾರ್ಯರು, ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಹಾಸನ ಇವರು ಸಹ ಪ್ರಸಕ್ತ ಸನ್ನಿವೇಶದಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು ಸಹ ಉನ್ನತ ಗುಣಮಟ್ಟದ ಶಿಕ್ಷಣ ನೀಡುವುದರ ಜೊತೆಗೆ ಎನ್.ಬಿ.ಎ ಯಿಂದ ಕಡ್ಡಾಯವಾಗಿ ಮಾನ್ಯತೆ ಪಡೆಯುವುದು ಅವಶ್ಯಕವಾಗಿರುತ್ತದೆ ಎಂದು ಅಭಿಪ್ರಾಯಪಟ್ಟರು.

ತದನಂತರ ಸಂಪನ್ಮೂಲ ವ್ಯಕಿಗಳಾಗಿ ವಿಶೇಷ ಆಹ್ವಾನಿತರಾದ ಡಾ. ಆರ್.ವಿ.ರಂಗನಾಥರವರು ಸದ್ಯ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿ ಕಾಲೇಜುಗಳಲ್ಲಿ Teaching Learning Processes ಗಳಿಗೆ ಹೆಚ್ಚು ಒತ್ತು ನೀಡಿ ಮಾನ್ಯತೆಗೆ ಕನಿಷ್ಟ ಮೂರು ವರ್ಷಗಳ ಅಂಕಿ-ಅಂಶಗಳು ಅವಶ್ಯಕತೆಯ ಬಗ್ಗೆ ತಿಳಿಸಿದರು.

----2

1. ಮಾನ್ಯತಾ ಕೋಶದ ಉಪ-ನಿರ್ದೇಶಕರಾದ ಶ್ರೀ ಸತೀಶ್ ಆರ್ ಹುದ್ದಾರ ಇವರು ಪ್ರಾಂಶುಪಾಲರನ್ನು ಉದ್ದೇಶಿಸಿ ಮಾತನಾಡುತ್ತ ತಮ್ಮ ಸಂಸ್ಥೆಯ ಕನಿಷ್ಠ ಎರಡು ಪ್ರೋಗ್ರಾಂಗಳನ್ನು ಮಾನ್ಯತೆ ಪಡೆಯುವ ಸಲುವಾಗಿ ಆಯ್ಕೆ ಮಾಡಿಕೊಂಡು ಅದಕ್ಕೆ ಸಂಬಂಧಿಸಿದ ಸ್ವಯಂ ಮೌಲ್ಯಮಾಪನದ ವರದಿಯನ್ನು ಶ್ರೀಘ್ರದಲ್ಲಿ ನಿರ್ದೇಶನಾಲಯಕ್ಕೆ ಕಳುಹಿಸಿಕೊಡಬೇಕೆಂದು ಹೇಳಿದರು ಹಾಗೆಯೇ ಇನ್ನುಳಿದ ಪ್ರೋಗ್ರಾಂಗಳು ಸಹ ಎನ್.ಬಿ.ಎ ತಯಾರಿಯನ್ನು ಮುಂದುವರಿಸಬೇಕೆಂದರು ಇದಕ್ಕೆ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ಶ್ರೀ ಡಿ.ಹೆಚ್. ಜಗದೀಶ್, ಜಂಟಿ ನಿರ್ದೇಶಕರುಗಳಾದ ಶ್ರೀ ಆರ್. ಮಂಜುನಾಥ ಮತ್ತು ಶ್ರೀ ರವಿಚಂದ್ರನ್ ಎನ್, ಕೂಡ ಸಹಮತಿಸಿದರು.

**(ಕ್ರಮ:** ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರು ಇವರ ಸೂಕ್ತ ಕ್ರಮಕ್ಕೆ)

2. ಡಾ. ಕೆ.ಜಿ ಚಂದ್ರಶೇಖರ್, ಪ್ರಾಂಶುಪಾಲರು, ಸರ್ಕಾರಿ ಎಸ್.ಕೆ.ಎಸ್.ಜೆ.ಟಿ ಸಂಸ್ಥೆ, ಬೆಂಗಳೂರು, ಡಾ. ಕರಿಸಿದ್ದಪ್ಪ, ಪ್ರಾಂಶುಪಾಲರು, ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಹಾಸನ ಡಾ. ಪ್ರಕಾಶ್, ಪ್ರಾಂಶುಪಾಲರು, ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಹಾವೇರಿ ಇವರು ತಮ್ಮ ಸಂಸ್ಥೆಯಲ್ಲಿ ಮಾನ್ಯತೆಗೆ ಸಂಬಂಧಿಸಿದ ಪ್ರಗತಿಯ ಬಗ್ಗೆ ವಿವರಿಸುತ್ತ ಬೋಧಕ/ಬೋಧಕೇತರ ಸಿಬ್ಬಂದಿಯ ಹಾಗೂ ಮೂಲಭೂತ ಸೌಕರ್ಯಗಳ ಕೊರತೆಯ ಬಗ್ಗೆ ವಿವರಿಸಿದರು ಈ ಕೊರತೆಯನ್ನು ನೀಗಿಸಿದ್ದಲ್ಲಿ ಎಲ್ಲಾ ಪ್ರೋಗ್ರಾಂಗೆ ಮಾನ್ಯತೆ ಪಡೆಯುವುದು ಸುಲಭವಾಗುತ್ತದೆ ಎಂದು ಅಭಿಪ್ರಾಯ ಪಟ್ಟರು. ಅದಕ್ಕೆ ಹಾಜರಾಗಿದ್ದ ಉಳಿದಂತೆ ಎಲ್ಲಾ ಪ್ರಾಚಾರ್ಯರು ಸಹಮತಿಸಿದರು.

**(ಕ್ರಮ:** ಜಂಟಿ ನಿರ್ದೇಶಕರು, ಆಡಳಿತ ಮತ್ತು ಜಂಟಿ ನಿರ್ದೇಶಕರು, ಯೋಜನೆ ತಾಂತ್ರಿಕ ಶಿಕ್ಷಣ ಇಲಾಖೆ ಇವರ ಸೂಕ್ತ ಕ್ರಮಕ್ಕೆ)

3. ಸಭೆಯ ಅಂತ್ಯದಲ್ಲಿ ಶ್ರೀ ಆರ್. ಮಂಜುನಾಥ, ಜಂಟಿ ನಿರ್ದೇಶಕರು ಮತ್ತು ಶ್ರೀ ರವಿಚಂದ್ರನ್ ಎನ್, ಜಂಟಿ ನಿರ್ದೇಶಕರು ಕೇವಲ ಕಾಲೇಜಿನ ಕುಂದು ಕೊರತೆಗಳ ಬಗ್ಗೆಯೇ ಗಮನ ಹರಿಸದೇ ಧನಾತ್ಮಕ ಚಿಂತನೆಯಿಂದ ಇರುವ ಸಂಪನ್ಮೂಲಗಳಿಂದಲೇ ಮಾನ್ಯತೆಗೆ ಸಂಬಂಧಿಸಿದ ಪ್ರಾಥಮಿಕ ಹಂತದ ತಯಾರಿಯಲ್ಲಿ ತೊಡಗಲು; ಹಂತ ಹಂತವಾಗಿ ಎಲ್ಲಾ ಕೊರತೆಗಳನ್ನು ನೀಗಿಸಲು ಇಲಾಖೆ ಕ್ರಮ ವಹಿಸುವದೆಂದು ತಿಳಿಸಿದರು.

ಡಾ. ಗುರುಪ್ರಸಾದ ಎಂ. ಹೂಗಾರ ಇವರ ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

ಜಂಟಿ ನಿರ್ದೇಶಕರು
(ಪಠ್ಯ ಕ್ರಮ ಅಭಿವೃದ್ಧಿ ಕೋಶ)